ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾಯದಂಡಾಧಿಕಾರಿಯವರ ನ್ಯಾಯಾಲಯ, ಪೊನ್ನಂಪೇಟೆ.

# ಕ್ರಿಮಿನಲ್ ಮೊಕದ್ದಮೆ ಸಂಖ್ಯೆ 1835/2022.

ಪ್ರಾ.ಸಾ.ಃ3
ಚಾ.ಸಾ.ಃ3

ಹೆಸರು ಃ ಹನುಮಂತ್ ಆರ್. ಒಟ್ಟಾರ್
ತಂದೆಯ ಹೆಸರು ಃ ರಮಣ್ಣ ವಡ್ಡರ್
ವಯಸ್ಸು ಃ 29 ವರ್ಷ
ಉದ್ಯೋಗ ಃ V.A
ವಿಳಾಸ ಃ ಕಾರವಾರ

... ................................................................................................... ...

ದಿನಾಂಕ 21 ನೇ ಫೆಬ್ರವರಿ 2024 ರಂದು ಸಾಕ್ಷಿಯನ್ನು ಕರೆಸಲಾಯಿತು ಮತ್ತು ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆಃ- ಮಾನ್ಯ ಸ ಸ ಅ ರವರಿಂದ ಃ -

ದಿ. 11.12.2021 ರಂದು ಅಬಕಾರಿ ಪೋಲೀಸರು ನನಗೆ ದೂರವಾಣಿ ಕರೆ ಮಾಡಿ ಗಾಂಜಾ ಮಾರಾಟ ಮಾಡುತ್ತಿರುವ ಬಗ್ಗೆ ತಮಗೆ ಮಾಹಿತಿ ಇತ್ತು ಆ ಬಗ್ಗೆ ದಾಳಿ ಮಾಡಬೇಕೆಂದು ಎಂದು ಸಹಕರಿಸಿ ಎಂದು ಕೇಳಿದರು. ಆ ನಂತರ ನನ್ನನ್ನು ಚಾಸ- 2 ರವರನ್ನು ಆನೆಚೌಕೂರು ಮತ್ತು ಮತ್ತಿಗೋಡು ಆನೆ ಶಿಬಿರದ ರಸ್ತೆ ಬಳಿ ಕರೆದುಕೊಂಡು ಹೋದರು. ಅಲ್ಲಿ ಇಬ್ಬರು ವ್ಯಕ್ತಿ ಹಾಗೂ ನೀಲಿ ಮತ್ತು ಬಿಳಿ ಬಣ್ಣದ ಡಿಯೋ ವಾಹನ ಪಂಚವಳ್ಳಿ ಕಡೆಯಿಂದ ಬಂತು ಅದನ್ನು ಪೋಲೀಸರು ತಡೆದು ನಿಲ್ಲಿಸಿದರು. ಸ್ವಲ್ಪ ಸಮಯದಲ್ಲಿ ಒಬ್ಬ ದ್ವಿ ಚಕ್ರ ವಾಹನ ಸಂಖ್ಯೆ ಕೆ ಎ 20 ಇಜೆ 2578 ರಲ್ಲಿ ಬಂದಿರುತ್ತಾರೆ. ಸದರಿ ವ್ಯಕ್ತಿಯನ್ನು ತಡೆದು ನಿಲ್ಲಿಸಿದಾಗ, ಅವರ ಹೆಸರು ವಿಳಾಸ ಕೇಳಲಾಗಿ ಸಂತೋಷ ತಂದೆ ಚಿನ್ನಬೋವಿ, 25 ವರ್ಷ, ಸತ್ಯಾಗಾಲು ಕಾವಲು ಗ್ರಾಮ, ಪಂಚವಳ್ಳಿ ಅಂಚೆ ಪಿರಿಯಾಪಟ್ಟಣ ತಾಲೂಕು, ಮೈಸೂರು ಎಂದು ತಿಳಿಸಿದರು. ಮತ್ತೊಬ್ಬ ವ್ಯಕ್ತಿ ಹೆಸರು ಹೇಳಲಿಲ್ಲ.

ಸದರಿ ವ್ಯಕ್ತಿಗೆ ನಮಗೆ ಬಂದ ಮಾಹಿತಿಯನ್ನು ತನಿಖಾಧಿಕಾರಿ ತಿಳಿಸಿ ವ್ಯಕ್ತಿ ಹಾಗೂ ವಾಹನವನ್ನು ಶೋಧನೆ ಮಾಡಲು ತಿಳಿಸಲಾಯಿತು. ವಾಹನ ಮತ್ತು ವ್ಯಕ್ತಿಯನ್ನು ಶೋಧನೆ ಮಾಡಿ ಅಂಗಶೋಧನೆ ಮಾಡಲಾಯಿತು. ಸದರಿ ವಾಹನದ ಡಿಕ್ಕಿ ಯನ್ನು ನೋಡಿದಾಗ ಒಂದು ಕಪ್ಪು ಬಣ್ಣದ ಕವರ್ ನಲ್ಲಿ 2 ಬಿಳಿ ಬಣ್ಣದ ಪ್ಲಾಸ್ಟಿಕ್ ಕವರ್ ಇತ್ತು. ಅದನ್ನು ತೆರೆದು ನೋಡಿದಾಗ ಘಾಟು ವಾಸನೆ

ಬರುತ್ತಿತ್ತು. ಗಾಂಜಾ ಹೂ ಮತ್ತು ಬೀಜ ಸದರಿ ಕವರ್ ನಲ್ಲಿ ಇತ್ತು. ಪಂಚರ ಸಮಕ್ಷಮ ಸದರಿ ಗಾಂಜಾವನ್ನು ಅಮಾನತುಪಡಿಸಲಾಯಿತು. ವಾಹನದಲ್ಲಿ ಇದ್ದ ತೂಕದ ಮಾಪನದ ಸಹಯೋದಿಂದ ಅಳತೆ ಮಾಡಲಾಗಿ 120 ಗ್ರಾಂ ಗಾಂಜಾ ಇತ್ತು. ಪೋಲೀಸರು ಮಹಜರು ಮಾಡಿ ಗಾಂಜಾವನ್ನು ಅಮನತ್ತುಪಡಿಸಿದರು ನನ್ನ ಸಹಿಯನ್ನು ಪಡೆದರು. ಮಹಜರಿನಲ್ಲಿ ನಿಪಿ- 2 (ಸಿ)ಎಂದು, ಶೊಧನಾ ಸಮುಚ್ಚಿತ ವಾರೆಂಟ್ ನಲ್ಲಿ 3 ಸಿ ಎಂದು, ಮಾದರಿ ಸೀಲಿನಲ್ಲಿ ಸಾಕ್ಷಿ ಸಹಿ 5 ಸಿ ಎಂದು ಗುರುತಿಸಲಾಯಿತು. ನಿಪಿ- 6 ಮತ್ತು 7 ಹಾಗೂ ಮು.ಮಾ ಗಳನ್ನು ಅನ್ನು ನೋಡಿ ಗುರುತಿಸಿರುತ್ತೇನೆ ಈ ಬಗ್ಗೆ ಪೋಲೀಸರಿಗೆ ಹೇಳಿಕೆಯನ್ನು ನೀಡಿರುತ್ತೇನೆ.

**ಪಾಟೀ ಸವಾಲು :- ಅರೋಪಿ ಪರ ವಕೀಲರವರಿಂದ :-**

ನಾವು ಮ. 12.20 ಕ್ಕೆ ಸ್ಥಳಕ್ಕೆ ಹೋಗಿರುತ್ತೇನೆ. ಆ ಸಮಯಕ್ಕೆ ಆರೋಪಿ ಮತ್ತು ಅವರ ವಾಹನ ಸ್ಥಳದಲ್ಲಿ ಇತ್ತು. ಸದರಿ ವಾಹನ ಸ್ಥಳಕ್ಕೆ ಯಾವಾ ಸಮಯಕ್ಕೆ ಬಂತು ಎಂದು ನನಗೆ ಗೊತಿಲ್ಲ.ನಾನು ಮಹಜರಿಗೆ, ನೊಟೀಸ್‌ಗೆ ಹಾಗೂ ಹೇಳಿಕೆಗೆ ಸಹಿ ಮಾಡುತ್ತೇನೆ. ಮ. 2.30 ರ ತನಕ ಸ್ಥಳದಲ್ಲಿ ಇದ್ದೆ. 2.00 ಗಂಟೆ ವೇಳೆಗೆ ಮಹಜರು ಪ್ರಕ್ರಿಯೆ ಮುಗಿದಿರುತ್ತದೆ. ನಾನು ಮಹಜರನ್ನು ಓದಿರುತ್ತೇನೆ ಹಾಗೂ ಘಟನೆ ಬಗ್ಗೆ ತಿಳಿದುಕೊಂಡಿರುತ್ತೇನೆ. ನಾನು ಹೋಗುವ ವೇಳೆಗಾಗಲೇ ಆರೋಪಿಯನ್ನು ಪೊಲೀಸರು ಶೋಧನೆಯನ್ನು ಮಾಡಿದ್ದರು. ನನ್ನ ಸಮಕ್ಷಮ ವಾಹನವನ್ನು, ಅಂಗ ಶೋಧನೆ ಮಾಡಲಿಲ್ಲ ಎಂದರೆ ಸರಿಯಲ್ಲ.

ನಾನು ಹೋಗುವ ವೇಳೆಗೆ ಮಹಜರನ್ನು ಬರೆದಿದ್ದರು ಎಂದರೆ ಸರಿಯಲ್ಲ. ನಾನು ಸಹಿಯನ್ನು ಸ್ಥಳದಲ್ಲೇ ಹಾಕಿರುತ್ತೇನೆ. ಯಾವ ಪೊಟ್ಟಣದಲ್ಲಿ ಎಷ್ಟು ಗಾಂಜಾ ಇತ್ತು ಎಂದು ಗೊತ್ತಿಲ್ಲ. ಒಟ್ಟು 120 ಗ್ರಾಂ ಇತ್ತು. ನಾನು ಹೋದ ನಂತರ ವೇ ತೂಕ ಮಾಡಿದರು. ನಾನು ಕರ್ತವ್ಯದಲ್ಲಿ ಇದ್ದ ಬಗ್ಗೆ ದಾಖಲಾತಿ ಹಾಜರುಪಡಿಸಿಲ್ಲ ಎಂದರೆ ಸರಿ. ನಾನು ಸ್ಥಳಕ್ಕೆ ಹೋಗಿಲ್ಲ, ನನ್ನ ಸಮಕ್ಷಮ ಮಹಜರು ಮಾಡಿಲ್ಲ ಎಂದರೆ ಸರಿಯಲ್ಲ. ನಾನು ಚಾಸಾ- 1 ರವರಿಗೆ ಸಹಾಯ ಮಾಡಲು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನಗೆ ಸ್ಥಳದ ಚೆಕ್ಕು ಬಂದಿ ಹೇಳಲಾಗುವುದಿಲ್ಲ.

**ಮರುವಿಚಾರಣೆ** :- - ಇಲ್ಲ -

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿದಾರರ ಹೇಳಿಕೆಯನ್ನು ನನ್ನ ಉಖ್ತಲೇಖನದಂತೆ ಗಣಕಯಂತ್ರದಲ್ಲಿಬೆರಳಚ್ಚು ಮಾಡಿಸಲಾಗಿರುತ್ತದೆ)
**ಓದಿ ಹೇಳಿ ಕೇಳಿಸಿ ಸರಿ ಇದೆ ಎಂದು ಒಪ್ಪಿದೆ.**

Sdxxx-
ಸಿವಿಲ್ ನ್ಯಾಯಾಧೀಶರು
ಮತ್ತು ಪ್ರದನ್ಯಾದಂ.,ಪೊನ್ನಂಪೇಟೆ.

(ಸಾಕ್ಷಿಯವರ ಸಹಿ)